# ಪ್ರೇಮಲೋಕದ ಜಕ್ಕವಕ್ಕಿಗಳು



'ನಿನ್ನ ವಯಸ್ಸನ್ನು ಸಮಯ, ದಿನ, ವರ್ಷಗಳಲ್ಲಿ ಲೆಕ್ಕ ಹಾಕಬೇಡ. ನನ್ನ ಆಸೆ ಕನಸುಗಳೊಂದಿಗೆ ಲೆಕ್ಕ ಹಾಕಿ ನೋಡು' ಎನ್ನುವುದು ಅಮೃತಾ ಪ್ರೀತಮ್‌ಗೆ ಇಮ್ರೋಜ್ ಬರೆದ ಪತ್ರವೊಂದರಲ್ಲಿನ ಸಾಲು. ಪ್ರೇಮದ ಉತ್ಕಟತೆಗೆ ಇದಕ್ಕೂ ಮಿಗಿಲಾದ ವ್ಯಾಖ್ಯೆ ಬೇಕೆ?

■ **ನಿವೇದಿತಾ ಎಚ್.**

ಭಾರತೀಯ ಸಾಹಿತ್ಯ ಕಂಡ ಉತ್ಕೃಷ್ಟ ಲೇಖಕಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಪಂಜಾಬಿ ಲೇಖಕಿ ಅಮೃತಾ ಪ್ರೀತಮ್ ಪ್ರೇಮಕ್ಕೆ ಹೊಸಭಾಷ್ಯ ಬರೆದವರು. ಸಾಹಿರ್ ಜೊತೆಗಿನ ಅವರ ಅಪೂರ್ಣ ಪ್ರೇಮ ತೀವ್ರತೆ ಮುಟ್ಟಿದ್ದು ಅವರನ್ನು ಶಾಶ್ವತವಾಗಿ ಅಗಲಿದಾಗಲೇ. ಜೀವನದುದ್ದಕ್ಕೂ ಸಾಹಿರ್ ಅವರನ್ನು ಆರಾಧಿಸಿಕೊಂಡು, ಅವರಿಗೊಂದು ರೊಟ್ಟಿಯನ್ನು ದಿನವೂ ಸುಟ್ಟು ಇಡುತ್ತಿದ್ದ ಅಮೃತಾರ ಪ್ರೇಮ ಅಸಾಧಾರಣವಾದುದು. ಈ ಪ್ರೇಮಕ್ಕೆ ಹೊಸತೊಂದು ಆಯಾಮ ನೀಡಿದ್ದು ಇಮ್ರೋಜ್. ಸಾಹಿರ್ ಕುರಿತ ಹುಚ್ಚು ಪ್ರೇಮದ ಅರಿವಿದ್ದೇ, ಅಮೃತಾರನ್ನು ಅಪಾರವಾಗಿ ಪ್ರೀತಿಸಿದವರು ಇಮ್ರೋಜ್.

ಅಮೃತಾರ ಕಾಂತಿಹೀನ ಬದುಕಿಗೆ ಚಿತ್ರಕಾರರಾಗಿದ್ದ ಇಮ್ರೋಜ್ ಬಣ್ಣಗಳನ್ನು ತುಂಬಿದರು. ಪ್ರೀತಿಯನ್ನು ಮಾತ್ರ ಉಸಿರಾಗಿಸಿಕೊಂಡು ಲೋಕದ ನಿಯಮಗಳಿಗೆ ಸಡ್ಡು ಹೊಡೆದಿದ್ದ ಈ ಜೋಡಿಯ ಪ್ರೇಮಕಥೆ ಅನನ್ಯ. ಅಮೃತಾರ ಅಗಲಿಕೆಯ ನಂತರ ಅವರ ನೆನಪಿನಲ್ಲೇ ಮೀಯುತ್ತಿದ್ದ ಇಮ್ರೋಜ್, 2023ರ ಡಿಸೆಂಬರ್ 22ರಂದು ಅಮೃತಾರನ್ನು ಸೇರಲು ಪಯಣ ಆರಂಭಿಸಿಯೇ ಬಿಟ್ಟರು. ಇಹಲೋಕದಲ್ಲಿನ ಅವರ ಪ್ರೇಮಗಾಥೆಗೆ ಪೂರ್ಣವಿರಾಮ ಹಾಕಿ, ಸಾವು ನೋವಿಲ್ಲದ ಅಮರಲೋಕದಲ್ಲಿ ಅಮೃತಾರನ್ನು ಸೇರಲು ಹೊರಟುಬಿಟ್ಟರು.

ಹುಟ್ಟಿನಿಂದ ಇಂದ್ರಜೀತ್ ಸಿಂಗ್ ಆಗಿದ್ದ ಇಮ್ರೋಜ್, ಅಮೃತಾರ ಪ್ರೇಮಪೂರದಲ್ಲಿ ಜೀತಿ, ಇಮಾ, ಇಮ್ವಾ, ಇಮ್ಮಾ ಎಂದೆಲ್ಲಾ ಕರೆಸಿಕೊಳ್ಳುತ್ತಿದ್ದರು. ಇಮ್ರೋಜ್ ಅಮೃತಾರನ್ನು, ಆಶಿ, ಅಮಿ, ಮಾಜಾ ಎಂದು ನಲ್ಮೆಯಿಂದ ಕರೆಯುತ್ತಿದ್ದರು. ಮಾಜಾ ಎನ್ನುವುದು ಇಟಾಲಿಯನ್ ಕಾದಂಬರಿಯ ನಾಯಕಿಯ ಹೆಸರು.

ಭಾವನೆಗಳೆಲ್ಲ ಬೆರಳತುದಿಗೆ ಬಂದಿರುವ ಸಂದರ್ಭದಲ್ಲಿ ಪತ್ರಗಳ ನವಿರುತನ ಇಂದಿನ ತಲೆಮಾರಿಗೆ ಹೆಚ್ಚೇನೂ ಪರಿಚಿತವಾದುದಲ್ಲ. ಅಕ್ಷರಗಳಲ್ಲಿ ಮನದ ಭಾವನೆಗಳನ್ನು ಪೋಣಿಸಿ, ಶಾಯಿಯ ಮೂಲಕ ಕಾಗದದ ಮೇಲೆ ಪ್ರೇಮ ನಿವೇದನೆ, ವಿರಹದ ಬಣ್ಣನೆ, ಭೇಟಿಯ ಕಾತುರತೆಗಳನ್ನು ತೆರೆದಿಡುತ್ತಿದ್ದ ಪತ್ರಗಳ ಬಿಸುಪು ಅವುಗಳನ್ನು ಕಾದು ಓದಿದವರಿಗಷ್ಟೇ ಗೊತ್ತು. ಇಂಥ ನೂರಾರು ಪತ್ರಗಳು ಅಮೃತಾ ಮತ್ತು ಇಮ್ರೋಜ್‌ರ ನಡುವೆ ವಿನಿಮಯಗೊಂಡಿವೆ. ಸಾಹಿತ್ಯಿಕ ಕಾರ್ಯಕ್ರಮಗಳಿಗಾಗಿ ದೆಹಲಿಯಿಂದ ಆಗಾಗ್ಗೆ ಹೊರಹೋಗುತ್ತಿದ್ದ ಅಮೃತಾರ ಅಗಲಿಕೆಯ ನೋವನ್ನು ಮರೆಸುತ್ತಿದುದೇ ಪತ್ರಗಳು. ಅವರ ನಡುವೆ ಹರಿದಾಡಿದ ಪತ್ರಗಳನ್ನು ಓದಿದರೆ ಬಹುಶಃ ನಮಗೆ ಅವರ ಪ್ರೀತಿಯ ಆಳ–ಹರವು ಕೊಂಚ ಮಟ್ಟಿಗೆ ನಿಲುಕುತ್ತದೆ. ಹಾಗೆ ಇಮ್ರೋಜ್ ಅಮೃತಾಗೆ ವಿವಿಧ ಸಂದರ್ಭಗಳಲ್ಲಿ ಬರೆದ ಕೆಲವೇ ಕೆಲವು ಪತ್ರಗಳ ಅನುವಾದ ಇಲ್ಲಿದೆ. ಅವರ ನಡುವಿನ ನಿರ್ಮಲ ಪ್ರೇಮವನ್ನು ಗ್ರಹಿಸುವುದಕ್ಕೆ ಈ ಪತ್ರಗಳು ನಮಗೆ ನೆರವಾಗಬಹುದು.

### ಪತ್ರ 1

ನನ್ನ ಪ್ರಪಂಚವೇ!
ನನ್ನ ಪ್ರೀತಿಯೇ!
ನಾನು ನಿನಗೆ ತಲೆಬಾಗಿ ನಮಿಸುವೆ!

ನಿನ್ನ ಮುಂದೆ ನಾನು ಅರ್ಪಣಾಭಾವದಿಂದ ತಲೆಬಾಗಿದಾಗಲೆಲ್ಲಾ, ನನ್ನ ನಿನ್ನ ನಡುವೆ ನೂರಾರು ಮೈಲುಗಳ ದೂರ ಉಂಟುಮಾಡಿರುವ ಮರಳುಗಾಡು ಥಟ್ಟನೆ ಮಾಯವಾದಂತೆನಿಸುತ್ತದೆ.

ನೀನು ನನ್ನ ಹಣೆಬರಹವೇ ಆಗಿರುವವರೆಗೂ, ನಾನು ಯಾವ ದುರದೃಷ್ಟಕ್ಕೂ ಹೆದರುವುದಿಲ್ಲ.

ನಿನ್ನ ಜೀತಿ

**ಬಾಂಬೆ, 24 ಅಕ್ಟೋಬರ್ 1959**

***

### ಪತ್ರ 2

ನನ್ನ ಪ್ರೇಮವೇ,